# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಶ್ರೀ ಎಂ.ಆರ್.ಕಂಧಾರೆ, ಅಂದಿನ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಯಾದಗಿರಿ ಹಾಗೂ ಇನ್ನಿಬ್ಬರು ಆಪಾದಿತ ಅಧಿಕಾರಿ/ ನೌಕರರುಗಳ ವಿರುದ್ಧ ಲೋಕಾಯುಕ್ತ ಇಲಾಖಾ ವಿಚಾರಣೆ-ಅಂತಿಮ ಆದೇಶ.

**ಓದಲಾಗಿದೆ:-**

1. ಉಪ ನಿಬಂಧಕರು ವಿಚಾರಣೆ-3 ಕರ್ನಾಟಕ ಲೋಕಾಯುಕ್ತ ಕಚೇರಿ, ಬೆಂಗಳೂರು, ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ: Compt/Uplok/GLB-1496/2014/DRE-3 ದಿನಾಂಕ:27.08.2016.
2. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 107 ಇಎನ್‌ಕ್ಯೂ 2016, ದಿನಾಂಕ:01.10.2016.
3. ಅಪರ ನಿಬಂಧಕರು ವಿಚಾರಣೆಗಳು-8, ಕರ್ನಾಟಕ ಲೋಕಾಯುಕ್ತ ಕಛೇರಿ, ಬೆಂಗಳೂರು ಇವರ ಇಲಾಖಾ ವಿಚಾರಣೆ ವರದಿ ಸಂಖ್ಯೆ: UPLOK-1/DE/465/2016/ ARE-8, ದಿನಾಂಕ:27.08.2021.
4. ಮಾನ್ಯ ಉಪ ಲೋಕಾಯುಕ್ತ ರವರ ಶಿಫಾರಸ್ಸು ವರದಿ ಸಂಖ್ಯೆ: UPLOK/DE/465/2016/ARE-8, ದಿನಾಂಕ:06.09.2021.

*******

**ಪ್ರಸ್ತಾವನೆ:-**

ಶ್ರೀ ವಿಕ್ರಮ ತಂದೆ ನಾಮದೇವ ಚವ್ಹಾಣ, ಸಾ|| ಬಾಲಜಿನಗರ (ಬಸವೇಶ್ವರ ತಾಂಡಾ) ಪೋಸ್ಟ್|| ಥಾನಗುಂಡಿ, ಯಾದಗಿರಿ ತಾಲ್ಲೂಕು ಇವರು 2011-12ನೇ ಸಾಲಿನ ಮೂಲಭೂತ ಸೌಲಭ್ಯ ಯೋಜನೆಯಡಿ ಯಾದಗಿರಿ ತಾಲ್ಲೂಕು ಅರಕೇರ(ಬಿ) ಗ್ರಾಮ ಪಂಚಾಯತಿ ವ್ಯಾಪ್ತಿಯ ಬಾಲಾಜಿನಗರ ಇಲ್ಲಿ ಕೈಗೊಂಡಿರುವ ನೀರು ಸರಬರಾಜು ಪೈಪ್‌ಲೈನ್, ಸಿ.ಸಿ.ರಸ್ತೆ ಹಾಗೂ ಚರಂಡಿ ಕಾಮಗಾರಿಗಳನ್ನು ಕಳಪೆಯಾಗಿ ನಿರ್ವಹಿಸಲಾಗಿದೆಯೆಂದು ಇದಕ್ಕೆ ಕಾರಣರಾದ ಅಧಿಕಾರಿ/ನೌಕರರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿ ಕರ್ನಾಟಕ ಲೋಕಾಯುಕ್ತ ಕಛೇರಿಗೆ ನೀಡಿದ್ದ ದೂರಿನ ಮೇರೆಗೆ ಕರ್ನಾಟಕ ಲೋಕಾಯುಕ್ತ ಕಛೇರಿಯು ತನಿಖೆ ನಡೆಸಿ ಮೇಲ ಕ್ರಮ ಸಂಖ್ಯೆ(1)ರಲ್ಲಿ ಓದಲಾದ ಪತ್ರದ ಜೊತೆ ಮಾನ್ಯ ಉಪಲೋಕಾಯುಕ್ತ-1 ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಸೆಕ್ಷನ್ 12(3)ರನ್ವಯ ನೀಡಿರುವ ವರದಿ/ದಾಖಲೆಗಳಿಂದ ಆರೋಪಗಳು ಮೇಲ್ನೋಟಕ್ಕೆ ಕಂಡು ಬಂದ ಹಿನ್ನಲೆಯಲ್ಲಿ ಈ ಕೆಳಕಂಡ 03 ಜನ ಆಪಾದಿತ ಅಧಿಕಾರಿ / ನೌಕರರ ವಿರುದ್ಧದ ಆರೋಪಗಳ ಬಗ್ಗೆ ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 11ರಂತೆ ನಡೆಸಲು ಸದರಿ ನಿಯಮಗಳ ನಿಯಮ 14(ಎ)ರನ್ವಯ ಪ್ರಕರಣವನ್ನು ಮೇಲೆ ಕ್ರಮ ಸಂಖ್ಯೆ (2)ರಲ್ಲಿ ರಲ್ಲಿ ಓದಲಾದ ದಿನಾಂಕ:01.10.2016ರ ಸರ್ಕಾರದ ಆದೇಶದಲ್ಲಿ ಮಾನ್ಯ ಉಪ ಲೋಕಾಯುಕ್ತರವರಿಗೆ ವಹಿಸಲಾಗಿತ್ತು

1. ಶ್ರೀ ಟಿ. ಬನ್ನಪ್ಪ, ಅಂದಿನ ಕಿರಿಯ ಇಂಜಿನಿಯರ್, ಜಿಲ್ಲಾ ಪಂಚಾಯತ್, ಯಾದಗಿರಿ.
2. ಶ್ರೀ ಮೊಹಮ್ಮದ ಕುತ್ಬುದ್ದೀನ ಪ್ಯಾರೆ, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಯಾದಗಿರಿ [ಪ್ರಸ್ತುತ ನಿವೃತ್ತ].
3. ಶ್ರೀ ಎಂ.ಆರ್.ಕಂಧಾರೆ, ಅಂದಿನ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಯಾದಗಿರಿ.

ಸದರಿ ಆದೇಶದ ಅನುಸಾರ ಮಾನ್ಯ ಉಪಲೋಕಾಯುಕ್ತ ರವರು ಅಪರ ನಿಬಂಧಕರು ವಿಚಾರಣೆಗಳು-8, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿದ್ದು, ವಿಚಾರಣಾಧಿಕಾರಿ ಯವರು ಆಪಾದಿತರ ವಿರುದ್ಧದ ಆರೋಪಕ್ಕೆ ಸಂಬಂಧಿಸಿದಂತೆ ಶಿಸ್ತು ಪ್ರಾಧಿಕಾರದ ಪರವಾಗಿ ಸಾಕ್ಷಿದಾರರು ಹಾಗೂ ಆಪಾದಿತ ನೌಕರರ ಹೇಳಿಕೆಗಳು ಮತ್ತು ಹಲವಾರು ದಾಖಲೆಗಳನ್ನು ಪರಿಶೀಲಿಸಿ ವಿವರವಾಗಿ ವಿಚಾರಣೆ ನಡೆಸಿದ್ದು, ಏತನ್ಮಧ್ಯೆ ಸದರಿ ಪ್ರಕರಣದಲ್ಲಿ ಭಾಗಿಯಾಗಿರುವ ಆಪಾದಿತ ಅಧಿಕಾರಿಯಾದ ಶ್ರೀ ಎಂ.ಆರ್.ಕಂಧಾರೆ, ಅಂದಿನ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಯಾದಗಿರಿ ಇವರು ದಿನಾಂಕ:13.07.2020ರಂದು ನಿಧನ ಹೊಂದಿರುವುದರಿಂದ ಇವರ ವಿರುದ್ಧದ ನಡವಳಿಯನ್ನು ಸ್ಥಗಿತಗೊಳಿಸಲಾಗಿದೆಯೆಂದು, ಸದರಿ ಪ್ರಕರಣದಲ್ಲಿ ಶಿಸ್ತು ಪ್ರಾಧಿಕಾರವು ದಾಖಲೆ/ಮಾಹಿತಿ ಹಾಗೂ ಸಾಕ್ಷಿ ಒದಗಿಸುವಲ್ಲಿ ವಿಫಲವಾಗಿರುವುದರಿಂದ ಇನ್ನುಳಿದ ಇಬ್ಬರು ಆಪಾದಿತರುಗಳ ವಿರುದ್ಧ ಮಾಡಿರುವ ಆರೋಪಗಳನ್ನು ಸಾಬೀತುಪಡಿಸಲು ಸಾಧ್ಯವಾಗಿರುವುದಿಲ್ಲವೆಂದು ಅಭಿಪ್ರಾಯಪಟ್ಟು ಮೇಲೆ ಕ್ರಮ ಸಂಖ್ಯೆ(3) ರಲ್ಲಿ ಓದಲಾದ ವರದಿಯನ್ನು ದಿನಾಂಕ:27.08.2021ರಂದು ಮಾನ್ಯ ಉಪ ಲೋಕಾಯುಕ್ತರವರಿಗೆ ಸಲ್ಲಿಸಿರುತ್ತಾರೆ. ಮಾನ್ಯ ಉಪಲೋಕಾಯುಕ್ತರವರು ವಿಚಾರಣಾಧಿಕಾರಿಗಳ ವಿಚಾರಣಾ ವರದಿಗೆ ಸಹಮತಿಸಿ, ಸದರಿ ಆಪಾದಿತರ ವಿರುದ್ಧ ಮಾಡಲಾದ ಆರೋಪಗಳಿಂದ ದೋಷಮುಕ್ತಗೊಳಿಸುವಂತೆ ಮೇಲೆ ಕ್ರಮ ಸಂಖ್ಯೆ (4) ರಲ್ಲಿ ಓದಲಾದ ದಿನಾಂಕ:06.09.2021ರ ವರದಿಯಲ್ಲಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ವಿಚಾರಣಾ ವರದಿ, ಮಾನ್ಯ ಉಪಲೋಕಾಯುಕ್ತರವರ ಶಿಫಾರಸ್ಸು ಹಾಗೂ ಇತರೆ ದಾಖಲೆಗಳನ್ನು ಪರಿಶೀಲಿಸಿದೆ. ಯಾದಗಿರಿ ತಾಲ್ಲೂಕು ಅರಕೇರ (ಬಿ) ಗ್ರಾಮ ಪಂಚಾಯತಿ ವ್ಯಾಪ್ತಿಯ ಬಾಲಾಜಿನಗರ ಇಲ್ಲಿ 200 ಮೀಟರ್ ಸಿ.ಸಿ.ರಸ್ತೆ ಕಾಮಗಾರಿಯನ್ನು ದಿನಾಂಕ:01.08.2013 ರಂದು ಪ್ರಾರಂಭಿಸಿ, ದಿನಾಂಕ: 28.08.2013ರಂದು ಪೂರ್ಣಗೊಳಿಸಲಾಗಿದ್ದು, ಮೊದಲಿಗೆ ಟೆಂಡರ್ ಅಧಿಸೂಚನೆಯಂತೆ 200 ಮೀಟರ್ ಸಿ.ಸಿ ರಸ್ತೆಯನ್ನು ಕೈಗೊಳ್ಳಲಾಗಿದ್ದು, ತದನಂತರ ಸಾರ್ವಜನಿಕರ ಒತ್ತಾಯದ ಮೇರೆಗೆ ಇನ್ನುಳಿದ 15 ಮೀಟರ್ ಸಿ.ಸಿ ರಸ್ತೆಯನ್ನು ಕೈಗೊಳ್ಳಲಾಗಿದ್ದು, ಗುತ್ತಿಗೆದಾರರು ಸದರಿ ಹೆಚ್ಚುವರಿ ಕೆಲಸಕ್ಕಾಗಿ ಸರ್ಕಾರದಿಂದ ಮೊತ್ತವನ್ನು ಪಡೆದಿರುವುದು ಹಾಗೂ ಆಪಾದಿತರು ರೂ.17,884/- ಗಳನ್ನು ಸರ್ಕಾರಕ್ಕೆ ಭರಣ ಮಾಡಿರುವುದು ದಾಖಲೆಯಿಂದ ಸ್ಪಷ್ಟವಾಗುತ್ತದೆ ಎಂದು ಹಾಗಾಗಿ ಆಪಾದಿತರು ಯಾವುದೇ ದುರ್ನಡತೆ ಎಸಗಿರುವುದು ಕಂಡುಬರುತ್ತದೆ. ಹಾಗೂ ಶ್ರೀ ಎಂ.ಆರ್.ಕಂಧಾರೆ, ಅಂದಿನ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಯಾದಗಿರಿ ಇವರು ದಿನಾಂಕ:13.07.2020ರಂದು ನಿಧನ ಹೊಂದಿರುವುದರಿಂದ ಈ ಅಂಶಗಳ ಹಿನ್ನೆಲೆಯಲ್ಲಿ ಪ್ರಕರಣದಲ್ಲಿ ಭಾಗಿಯಾಗಿರುವ ಇನ್ನುಳಿದ 2 ಜನ ಆಪಾದಿತರ ವಿರುದ್ಧ ಮಾಡಲಾದ ಆರೋಪವು ಇಲಾಖಾ ವಿಚಾರಣೆಯಲ್ಲಿ ಸಾಬೀತಾಗಿಲ್ಲದಿರುವುದು ಸ್ಪಷ್ಟವಾಗುತ್ತದೆ. ಆದ್ದರಿಂದ ವಿಚಾರಣಾ ವರದಿಯಲ್ಲಿ ಆಕ್ಷೇಪಿಸಬಹುದಾದ ಯಾವುದೇ ಅಂಶಗಳು ಕಂಡುಬರುವುದಿಲ್ಲ. ಹಾಗಾಗಿ ವಿಚಾರಣಾ

....3

ವರದಿಯನ್ನು ಅಂಗೀಕರಿಸಿ ಸದರಿ ಆಪಾದಿತ ಅಧಿಕಾರಿ / ನೌಕರರ ವಿರುದ್ಧ ಮಾಡಲಾದ ಆರೋಪಗಳಿಂದ ದೋಷಮುಕ್ತಗೊಳಿಸಲು ಸರ್ಕಾರವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 91 ಇಎನ್‌ಕ್ಯೂ 2021, ಬೆಂಗಳೂರು, ದಿನಾಂಕ: 17.02.2022.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಈ ಕೆಳಕಂಡ ಕ್ರಮ ಸಂಖ್ಯೆ (1) ಮತ್ತು (2) ರಲ್ಲಿನ ಆಪಾದಿತ ಅಧಿಕಾರಿ / ನೌಕರರುಗಳ ವಿರುದ್ಧ ಮಾಡಲಾದ ಆರೋಪವು ವಿಚಾರಣೆಯಲ್ಲಿ ಸಾಬೀತಾಗಿಲ್ಲವಾದ್ದರಿಂದ ಸದರಿಯವರುಗಳನ್ನು ದೋಷಮುಕ್ತಗೊಳಿಸಿ ಆದೇಶಿಸಿದೆ.

1. ಶ್ರೀ ಟಿ. ಬನ್ನಪ್ಪ, ಅಂದಿನ ಕಿರಿಯ ಇಂಜಿನಿಯರ್, ಜಿಲ್ಲಾ ಪಂಚಾಯತ್, ಯಾದಗಿರಿ.
2. ಶ್ರೀ ಮೊಹಮ್ಮದ ಕುತ್ಬುದ್ದೀನ ಪ್ಯಾರೆ, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಯಾದಗಿರಿ [ಪ್ರಸ್ತುತ ನಿವೃತ್ತ].

ಶ್ರೀ ಎಂ.ಆರ್.ಕಂಧಾರೆ, ಅಂದಿನ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಯಾದಗಿರಿ. ಇವರು ದಿನಾಂಕ:13.07.2020ರಂದು ನಿಧನ ಹೊಂದಿರುವುದರಿಂದ ಇವರ ವಿರುದ್ಧದ ನಡವಳಿಯನ್ನು ಮುಕ್ತಾಯಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

17/2

**(ಕೆ.ನದೀಮ್ ಅಹ್ಮದ್),**
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

17/02

**ಇವರಿಗೆ:**

1. ಮಹಾಲೇಖಪಾಲರು, (ಅ ಮತ್ತು ಇ) ಕರ್ನಾಟಕ, ಬೆಂಗಳೂರು.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು ಲೋಕೋಪಯೋಗಿ ಇಲಾಖೆ/ ಜಲಸಂಪನ್ಮೂಲ ಇಲಾಖೆ.
4. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಯಾದಗಿರಿ
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಯಾದಗಿರಿ.
6. ಅಪರ ನಿಬಂಧಕರು ವಿಚಾರಣೆಗಳು-15, ಕರ್ನಾಟಕ ಲೋಕಾಯುಕ್ತ ಕಛೇರಿ, ಬಹುಮಹಡಿ ಕಟ್ಟಡ, ಬೆಂಗಳೂರು.

...4

7. ಸಂಬಂಧಪಟ್ಟ ಅಧಿಕಾರಿ/ನೌಕರರಿಗೆ ಮುಖ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಯಾದಗಿರಿ ಇವರ ಮುಖಾಂತರ.
8. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
9. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ/ ಉಪ ಕಾರ್ಯದರ್ಶಿ (ಆಡಳಿತ) ಇವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರು.
10. ಮೇಲ್ವಿಚಾರಕರು ಗಣಕಯಂತ್ರ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ.
11. ಹೆಚ್ಚುವರಿ ಪ್ರತಿ : ರಕ್ಷಾ ಕಡತ : ಕಂಪ್ಯೂಟರ್ ಸೆಲ್.